Email: ksoulwc@gmail.com
Phone: 86905 44544

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570006

## ಕಲಿಕಾರ್ಥಿಗಳ ಕಲ್ಯಾಣ ಕೇಂದ್ರ

## "ಮಾರ್ಗದರ್ಶಿ"

**5ನೇ ವಿದ್ಯಾರ್ಥಿ–ಅಧಿಕಾರಿ ನೇರ ಸಂವಾದ ಕಾರ್ಯಕ್ರಮ**





ದಿನಾಂಕ: 04.09.2023ರಂದು ಸೋಮವಾರ ಬೆಳಿಗ್ಗೆ 10.30 ಗಂಟೆಗೆ **"ಮಾರ್ಗದರ್ಶಿ" ವಿದ್ಯಾರ್ಥಿ–ಅಧಿಕಾರಿ ನೇರ ಸಂವಾದ ಕಾರ್ಯಕ್ರಮವನ್ನು** ಪ್ರಾರಂಭಿಸಲಾಯಿತು. ಬಿಎಸ್ಸಿ ಐಟಿ ಕುರಿತಾದ ಮಾಹಿತಿ ಕೋರಿ ಪ್ರಾರಂಭವಾದ ಕರೆಗಳು ಪ್ರವೇಶಾತಿ, ಪರೀಕ್ಷಾ ವಿಭಾಗದ ಬಗೆಗಿನ ಮಾಹಿತಿ ಕೇಳುವುದರೊಂದಿಗೆ ಮುಕ್ತಾಯಗೊಂಡಿತು. ಕೆಲವು ಸಮಸ್ಯೆಗಳಿಗೆ ಕಾರ್ಯಕ್ರಮದ ಮುಕ್ತಾಯದ ಮುಂಚಿತವಾಗಿಯೇ ಪರಿಹಾರ ನೀಡಿ ವಿದ್ಯಾರ್ಥಿಗಳಿಗೆ ಪುನಃ ಕರೆ ಮಾಡಿ ಮಾಹಿತಿ ನೀಡಲಾಯಿತು. ಕಾರ್ಯಕ್ರಮದ ಪೂರ್ಣ ಅವಧಿಯಲ್ಲಿ ನಿರಂತರವಾಗಿ ಕರೆಗಳು ಬಂದುವು. ಇದೇ ಸಂದರ್ಭದಲ್ಲಿ ಪುನರಾವರ್ತಿತ ಕರೆಗಳ ಬಗೆಗೆ ಪರಿಶೀಲಿಸಿ ಆ ಪ್ರಕ್ರಿಯೆಯು ಯಾವ ಹಂತಗಳಲ್ಲಿದೆ ಎಂಬ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು.

ಸಮಸ್ಯೆ ಪರಿಹಾರವಾದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಸೇವೆಗೆ ಧನ್ಯವಾದ ಹೇಳಲು ಕರೆ ಮಾಡಿದ್ದರು. ಕಾರ್ಯಕ್ರಮದಲ್ಲಿ ಸಂಯೋಜನಾಧಿಕಾರಿಗಳು, ಸಹಾಯಕ ಕುಲಸಚಿವರು, ಅಧೀಕ್ಷಕರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಮುಂದಿನ ವಿದ್ಯಾರ್ಥಿ–ಅಧಿಕಾರಿ ನೇರ ಸಂವಾದ ಕಾರ್ಯಕ್ರಮವನ್ನು ದಿನಾಂಕ: **11.09.2023** ಸೋಮವಾರ ಬೆಳಿಗ್ಗೆ 10.30 ಗಂಟೆಗೆ ನಡೆಸಲಾಗುವುದು.

ಸಂಯೋಜನಾಧಿಕಾರಿಗಳು 4/9/23

**ಸಂಯೋಜನಾಧಿಕಾರಿ**
**ಕಲಿಕಾರ್ಥಿಗಳ ಕಲ್ಯಾಣ ಕೇಂದ್ರ**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು-570 006